Mr. SPEAKER.—The question is :

"That the Karnatak and Mysore Universities (Amendment) Bill, 1965, be taken into consideration."

The motion was adopted.

CLAUSES 2 TO 4.

Mr. SPEAKER.—There are no amendments. I will put all the clauses to the House. The question is :

"That clauses 2 to 4, both inclusive, stand part of the Bill."

The motion was adopted.

Clauses 2 to 4, both inclusive, were added to the Bill.

Mr. SPEAKER.—The question is :

"That Clause 1, the Title and the Preamble stand part of the Bill."

The motion was adopted.

Clause 1, the Title and the Pre-amble were added to the Bill.

Motion to pass.

Sri S. R. KANTHI (Minister for Education).—Sir, I beg to move :

"That the Karnatak and Mysore Universities (Amendment) Bill, 1965, be passed."

Mr. SPEAKER.—The question is :

"That the Karnatak and Mysore Universities (Amendment) Bill, 1965, be passed."

The motion was adopted.

MYSORE VILLAGE PANCHAYATS AND LOCAL BOARDS (AMENDMENT) BILL, 1965.

(Motion to consider)

Sri KONDAJJI BASAPPA (Deputy Minister for Co-operation): Sir, I beg to move :

"That the Mysore Village Panhayats and Local Boards (Amendment) Bill, 1965, be taken into consideration."

Mr. SPEAKER.—Motion moved :

"That the Mysore Village Panchayats and Local Board (Amendment) Bill, 1965, be taken into consideration."

Now there is one hour allotted for this Bill.

Sri S. M. KRISHNA.—We have very little work to do. Time may be extended for this Bill.

Mr. SPEAKER.—Tomorrow we have got those matters relating to the incident and the question of the Leader of the Opposition, recognition of parties. Moreover, one hour was agreed to be accepted by the House.

Sri C. J. MUCKANNAPPA.—You have been always generous; whenever we required, you have relaxed the extent of time from half to one hour.

Mr. SPEAKER.—When have I changed myself? Within reasonable limits, I will try to adjust.

Mr. SPEAKER.—We shall continue the Debate till 6 P.M. and the reply would be tomorrow; let the Debate take place today.

(MR. DEPUTY SPEAKER in the Chair)

Sri KONDAJJI BASAPPA (Deputy Minister for Co-operation).—Sir, under the present Mysore Village Panchayats and Local Boards Act, 1959, the term of the Panchayats and Taluk Boards constituted thereunder is four years extensible by Government from time to time for a period not exceeding five years in the aggregate. The four year term expired on different dates commencing from March 1964. The Joint Select Committee Report was presented on 15th of the current session. Because of some urgent work and intervening holidays that Bill could not be taken up during the current session. Meanwhile, the term of the Panchayats and Taluk Boards is due to expire on different dates commencing from the month of March 1965, it has been necessitated to bring this amending Bill. It is proposed to amend the present Act taking power to extend the term of these bodies to another year so that they may continue to be in office till the new elected bodies come under the new legislation. Hence this Bill.

† Sri S. M. KRISHNA.—Sir, I rise to oppose this amendment moved so cursorily, in such a lighthearted fashion by the Deputy Minister. This one page amendment, containing a sentence is a sorry commentary on the State Government. One thing stands out very clear and that is, this Government, headed by Sri Nijalingappa, does not have any faith in the Panchayatraj programme. Secondary, this Government, headed by Sri Nijalingappa, does not have any confidence in certain democratic values. We have said repeatedly and assurances have been given to this House—assurances, I believe, were solemnly given—with certain degree of honesty also; but, today what do we find? Three days before when I brought this to the attention of the Leader of the House and the Leader of the Government, he was pleased to say, without even understanding the implications, that they were going to conduct elections under the present Act and as early as possible.

Sri KONDAJJI BASAPPA.—I do not think he made that statement. I am sorry, it is a wrong report. I was also present in the House on that

day. When the new Bill is passed, immediately we will hold it; that is all what he meant.

Sri S. M. KRISHNA.—Sir, I know Sri Kondajji Basappa is pleading a bad case, a hopeless case. Well, with the majority that they command, they will certainly succeed and they will carry the day and they will not carry the people with them. People are there to decide and they will be able to judge every one of us.

Now, Sir, the Deputy Minister contends that the Chief Minister did not make any such statement, and if he has made a statement, that statement has been misunderstood by some of us. Well, we can go into the proceedings of the House; we can go into the reports of the newspapers. They have done more justice. He said that we are going to conduct elections under the present Act. I would like to know what is the present Act which governs the Village Panchayats and the Taluk Board in this State. the new Act has not been approved by this House. After all, the report of the Select Committee is placed on the table of this House. It has been circulated.

Sir, let me come back to the history of this Village Panchayat and Taluk Boards Act. Even seven months back when this House was convened, we drew the attention of the Government that the term of the present Panchayats and Taluk Development Councils are running out and the Government has got to get serious with the idea of conducting elections to these local bodies. Then, an assurance was given to us that a Committee headed by no less a person than the Deputy Minister, was going to give a report on the working of the Panchayats and local institutions and on the basis of the recommendations of that Committee, a comprehensive, progressive Bill would be drafted and it would be placed before this House and according to the new Act elections will be held within reasonable time. Now, what has happened ? I for one, wonder, what the difficulty the ruling party or the present Government is confronted with ? Is the difficulty surmountable or insurmountable ? I do realise that Sri Nijalingappa, the Chief Minister, has not been able to get a clear guidance from the Congress Party. I am also aware that there have been very deep differances among the members of the Congress Party itself about certain aspects of the Bill as presented or reported by the Joint Select Committee. But, is that a justifiable reason ? Is that a valid reason for the entire elections to be postponed by one more year ?

Sri KONDAJJI BASAPPA.—It is not the intention of the amending Bill to postpone the elections. Some of the terms expire in March, some in April and some in May. Suppose, in the next session we pass the new legislation. Then, under the new legislation, immediately elections would be held. It need not be necessarily be extended by one year.

5-00 P.M.

Sri S. M. KRISHNA.—While referring the Bill to the Select Committee, we were given to understand that that was an urgent measure. I do not know if the committee had bestowed enough thought

(SRI S. M. KRISHNA)

or as much thought as was necessary to a Bill with such far-reaching consequences. The Select Committee has made certain recommendations and we were under the impression till three days back that the Bill as reported by the Select Committee would be placed before the House for discussion and we would pass an enactment under which elections would be held in this State. But here comes the thunder-bolt. I was given to understand by very reliable authorities that many of you who sit on the other side very sincerely feel that the atmosphere is just not ripe for conducting elections. I do not know if the Government is willing to conduct elections if many of us who are sitting on this side give an assurance that we are not going to contest those elections. After all, we are governed by certain set of principles. Principles should not be given a gobye just to suit the convenience of one single political party. Is it too much for any one of us to ask of the ruling party this little respect for certain democratic values. Does the Government seriously believe in what they contend? The legislature was summoned on the 12th of last month and we are asked to sit till the third. What prevented the State Government to ask us to stay here for two or three days more? What prevented the State Government from moving this Panchayatraj Bill for a threadbare discussion in this House? There might be only two answers to this poser: One is that either the State Government is not serious about the implementation or about the enactment of a new Bill or, if they are serious about it, they do not have the courage of their conviction to face the people at large. In the proviso to section 24, the Government want to substitute the words '5 years' by the words '6 years'. The sentence does not reflect innocence; it is fraught with grave danger and grave consequences also. If this Government had—I use these words with reluctance—any sense of shame, it should not have come out with such an amendment. I regret to say that but none-the less we owe a duty to the people, to the thousands of village panchayats in this State. After all, if you and I who have been sent here as members of the legislature for 5 years have no business to stay here after 5 years without getting a fresh mandate from the people, what right the village panchayats and taluk boards have to stay there without getting a fresh mandate from the people? Why are you shirking your responsibility and why are you backing out? That means, you have lost confidence in yourselves and in the people and in return they have lost their confidence in you. The only way you can go on is to extend the lives of some of these lifeless village panchayats and taluk boards for one more year. This does not fit in with the principles, with the lip service you so often pay to the panchayatraj institutions. We regret to say this but none-the-less we are forced to say all these things by the Government of Mysore. Even now I call upon the Government that in spite of this amendment they should get serious about conducting the elections to various panchayats. I do not care whether you are going to conduct the elections according to the old Act or according to the new

Act. But I demand in the name of the people that the elections must be conducted within the next 3 or 4 months. Here I may refer to the assurance given by the Leader of the House that they would be held as early as possible. I have watched him at the beginning with great admiration, later on without admiration...

Sri C. J. MUCKANNAPPA.—On a point of order, Sir. The member in charge of the Bill is entitled to introduce and move a Bill for consideration. According to the distribution of portfolios and assignment of work, the Deputy Minister is only to take care of the co-operative movement in this State. As such, he is not competent to be in charge of the Bill and cannot move this Bill for consideration. It may be said that a Minister includes a Deputy Minister but that is for the purpose of answering an interpellation. But Answering an interpellation is quite different from moving a Bill for consideration. I want ruling on this point of order.

Sri B. D. JATTI (Finance Minister).—The Deputy Minister derives all the powers which a Minister enjoyes. It can be done by an executive order; it is not necessary for any amendment either in the rules or in the Act governing the Ministers or any thing like that.

Sri C. J. MUCKANNAPPA.—There is a specific ruling under which the Speaker has pointed out that under the Constitution a Minister includes a Deputy Minister. The Deputy Minister can answer an intepellation but not move a Bill. The Deputy Minister is not in charge of the Bill; it is the Minister for Co-operation, Development and Panchayatiraj who is in charge of it and who can move the Bill for consideration and not the Deputy Minister.

Sri B. D. JATTI.—Sir, the rule is very clear. It says :

> "In the case of a Government Bill any member acting on behalf of the Government and in the case of any other Bill the member who has given notice of the motion for leave to introduce the Bill.....

Sri C. J. MUCKANNAPPA.—That is for private members other than Ministers.

Mr. DEPUTY SPEAKER.—The member will please see the first part which says that " in the case of a Government Bill the member acting on behalf of the Government..." It is very clear. There is no point of order.

Sri S. M. KRISHNA.—Sir, I was referring to the assurance given by the Chief Minister that elections would be conducted as early as possible. I for one fail to understand what the Chief Minister conveys when he says that elections would be held as early as possible. Some of us who have been members of this sugust House for the past 3 years and many who have been members of this House for a much longer period than I am, do know the meaning attached to an assurance when it is given on behalf of the Government; it invariably means that the Government

(SRI S. M. KRISHNA)

are not serious about it and so to avoid or to put it off indefinitely they resort to giving such answers. Hence it is not in the larger interests of this State; it is not even in the interests of the village panchayats and taluka development boards that they should continue the way they are doing without giving an opportunity to the people to pass their verdict on all these panchayats and boards.

With these few observations, I condemn this amendment as a black amendment. I condemn every letter and every word of this amendment and ask the Government to withdraw this amending Bill.

† SRI V. S. PATIL:—Sir, this is a very small Bill containing only 3 clauses, but the effect of this Bill is very wide and farreaching. I am a member of this House since 1957 and since then I am observing that this particular Government is trying to undo certain good things and is trying to postpone the implementation of good things that are in vogue in the country. Since our indepedence one of the main aims is the development of our country from all points of view, but the Congress Government had centred all its attention on the development of the urban areas especially the principal cities like Bombay, Bangalore, Calcutta, etc., and the development of rural areas was neglected. This war keenly felt by our late Prime Minister Jawaharlal Nehru. In some meetings he was asked as to who would be his successor when the late Prime Minister replied that the Panchayatiraj would be his successor. The main aim for which he was trying to develop democratic principles in the villages, in the rural areas of our country was the development of the countryside. So, Sir, the other side which is thriving on his name is kept on the treasury benches for this purpose. But are they following what that great man had stated and assured to the nation? Even though from 1957 hundreds of Bills have been passed, in this auguat House, according to me, there are only 2 Bills which are really important so far as the rural areas of our State are concerned. They are land reforms and panchayatiraj. These are the only two Bills which really go to the cultivator, to the villager, to the last man in our State. What has this Government done regarding these two matters? There is a saying that when you don't want to do anything, appoint a committee just to postpone matters indefinitely or to avoid their implentation. So in the matter of land reforms a committee was appointed under the Chairmanship of Sri B. D. Jatti. They took some time toured round the whole State, recorded evidence and then submitted a detailed reportto this House. Then that report was also discussed on the floor of this House and of our ex-Minister Sri Channabasappa took about 4 days to place his views on the floor of this House. Ultimately a draft Bill was placed before this House and that Bill was discussed for about 100 days by the Select Committee and then it was passed. But was it implemented? No. It has not been implemented at all. Since the last 4 years it has been kept in cold storage. For the second Bill our Deputy Minister Sri Kondajji Basappa was the Chairman of another Committee for giving a

report. He also toured round all these areas and even outside the State and collected much information. He also submitted one good report just like Sri Jatti. Then a draft Bill was presented to the House and that Bill was discussed and sent to a Joint Select Committee which sat day and night and prepared a report which was submitted to this House on the 15th of last month. Suddenly to postpone the implementation of this Bill an amending Bill of 3 clauses has been placed before us. The only intention of Government is not to implement any of these laws which are really beneficial tothe rural parts of the State. In fact, they do not want anything which will really benefit and result in increased production either in factories or in agriculture. These people are representaives not reallv of the persons engaged in production or in agriculture, but according to me they are represntatives on of Dallals or middlemen. That is why they want to keep up their constituencies of Dadagiri and nothing else. "Dadagiri" means 'Gundagiri'. That is the reason why production has gone down both in mills and factories and in agriculture. I read from the report of the Planning Commission relating to this State that the target was fixed at 1½ lakh tons and what is realized is not even one-third of it, in all the three years of the third plan. I would request, Sri Hegde, a new recruit to the Congress Assemblage, to study the report of his own party bosses. It clearly shows how the Congress has failed in the matter of agricultural production. Why is that? Because the people do not feel that they have anything to do with plans and production. For that reason, Government is really guilty of omissions and commissions.

[MR. SPEAKER in the Chair]

Sir, the period of 4 years given originally was increased by one year and that period is also expiring. Now, Government is to be given power to extend it by one year more. So far as the tenancy laws are concerned, evtensions have been going on since 1956. Every year certain povisions of the Bombay Act are suspended. Thus so many years have elapsed and the land reforms act passed by this Legislature is not being implemented. This clearly shows that the present Congress Party in the State is adverse to increasing agricural production, to development of rural areas and to the progress of the whole nation as such. It is due to this attitude of the Congress Party that there is a crisis in food, prices are rising. This is a fit time for the President of India to abolish all the Legislatures and to take over the adminstration in his own hands. There is no alternative to it.

Though this is a small Bill running to half-a-page, it is dangerous in its effects. It is an admission that the Congress Party cannot do anything good to this State. Therefore I submit that this bill deserves to be thrown out and the original Panchyati Raj Bill should be taken up.

† ಶ್ರೀ ಸಿದ್ದಯ್ಯ ಕಾಶೀಮಠ್.—ಅಧ್ಯಕ್ಷರೇ, ನಾನು ಈ ಮಸೂದೆಯನ್ನು ವಿರೋಧ ಮಾಡುತ್ತೇನೆ. ಮಂತ್ರಿಗಳು ಹೇಳಿದ ಹಾಗೆ ಇದರಲ್ಲಿ ಏನೂ ಕೊಟ್ಟಿಲ್ಲ. ನಕಾರಣಗಳನ್ನು ತೋರಿಸದೆ ಮುಂದೆ ಆಗತಕ್ಕ ಮೈಸೂರು ರಾಜ್ಯದ ಪಂಚಾಯತಿ ಎಲೆಕ್ಷನ್‌ಗಳನ್ನು ಇನ್ನು ಮುಂದೆ ಹಾಕ

(ಶ್ರೀ ಸಿದ್ಧಯ್ಯ ಕಾಶೀಮಠ)

ಬೇಕೆಂದು ಹೊರಟಿದ್ದಾರೆ. ಇನ್ನೂ ಒಂದು ವರ್ಷ ಕಾಲ ಈ ಚುನಾವಣೆಗಳನ್ನು ಹೆಚ್ಚಿಸುವುದಕ್ಕೆ ಹೊರಟಿರುವುದು ಸಮಂಜಸವಾದುದಲ್ಲ. ಯಾವಾಗಲೂ ಕಾಲಕ್ಕೆ ಸರಿಯಾಗಿ ಚುನಾವಣೆಗಳಾಗ ಬೇಕು. ದೇಶಕ್ಕೇ ಒಂದು ಕ್ಷೇಮ ಇದು. ದೇಶದಲ್ಲಿ ಇದೊಂದು ಅಗಾಧವಾದ ಪ್ರಶ್ನೆಯಾಗಿರು ವುದರಿಂದ ಇಂತಹವುಗಳಿಗೆ ಸರ್ಕಾರದವರು ಅನ್ಪದ ಕೊಡುತ್ತಿದ್ದಾರೆ. ಅದು ತಪ್ಪು. ಪಂಚಾಯತಿ ರಾಜ್ಯದಲ್ಲಿ ಇರುವ ಹಕ್ಕನ್ನು ಜನಗಳಿಗೆ ಕೊಡಬೇಕು. ಈ ಚುನಾವಣೆ ಅವಧಿ 4 ವರ್ಷಗಳಾದ ನಂತರ 5ನೇ ವರ್ಷ ಮುಗಿಸಿ ಮತ್ತೆ 6ನೇ ವರ್ಷದಲ್ಲಿ ಮುಂದುವರಿಸಬೇಕಾಗಿದೆಯೆಂದು ಕೇಳುವುದು ಅಷ್ಟು ಸಮಂಜಸವಾದುದಲ್ಲವೆಂದು ನಾನು ಹೇಳುತ್ತೇನೆ. ನಾನಾದರೂ ಇದಕ್ಕೆ ಸಂಬಂಧಪಟ್ಟ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿಯೂ ಹಾಗೂ ಸಂಬಂಧಪಟ್ಟ ಮಂತ್ರಿಗಳಲ್ಲೂ ಮೇಲಿಂದ ಮೇಲೆ ಈ ವಿಚಾರದ ಬಗ್ಗೆ ಹೇಳುತ್ತಿದ್ದೆ. ಈ ಕಾನೂನನ್ನು ತೀವ್ರಗತಿಯಲ್ಲಿ ಪಾಸ್ ಮಾಡಿ ಅದರ ಮುಖಾಂತರ ಚುನಾವಣೆಯನ್ನು ಫೆಬ್ರವರಿ – ಮಾರ್ಚ್‌ನಲ್ಲಿ ಮಾಡುತ್ತೇವೆಂದು ಹೇಳಿದ್ದರು. ಆಲ್ಲದೆ ಈ ಬಿಲ್ಲನ್ನು 18ನೇ ಜನವರಿಯಲ್ಲಿ ಇಂಟ್ರಡ್ಯೂಸ್ ಮಾಡುತ್ತೇವೆ. 22ನೇ ತಾರೀಖಿನಲ್ಲಿ ಪಾಸ್ ಮಾಡಿ ಅಲ್ಲಿಂದ 24ರಲ್ಲಿ ರಾಜ್ಯಪಾಲರ ಸಹಿಮಾಡಿಸಿ 25-26ರಲ್ಲಿ ಪ್ರೆಸಿಡೆಂಟರ ಒಪ್ಪಿಗೆ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದರು. ಆ ರೀತಿ ಹೇಳಿದ ಮಾತು ಈಗ ಎಲ್ಲಿ ಹೋಯಿತೋ ಗೊತ್ತಾಗಲಿಲ್ಲ. ದೇಶದಲ್ಲಿ ಜನವರಿ-ಫೆಬ್ರವರಿ-ಮಾರ್ಚ್‌ನೊಳಗೆ ತಾಲ್ಲೂಕ್ ಪಂಚಾಯತಿ ಮತ್ತು ತಾಲ್ಲೂಕ್ ಬೋರ್ಡ್‌ಗಳ ಚುನಾವಣೆ ಗಳನ್ನು ಮುಗಿಸಬೇಕೆಂದು ಹೇಳಿರುವುದು ಎಲ್ಲರಿಗೂ ತಿಳಿದ ವಿಷಯ. ಇಂಥಾದ್ದರಲ್ಲಿ ಏತಕ್ಕ ಮುಂದುವರಿಸಿದ್ದಾರೆ ಗೊತ್ತಾಗಲಿಲ್ಲ. ಈಗಾಗಲೇ ದೇಶದಲ್ಲಿ ಸಾಕಷ್ಟು ಸಮಸ್ಯೆಗಳು ಬಂದಿವೆ. ಇತ್ತಕಡೆ ಆಹಾರ ಧಾನ್ಯಗಳ ಬೆಲೆ ವಿಪರೀತವಾಗಿದೆ. ಅತ್ತಕಡೆ ಎ. ಜಿ. ಒ. ಗಳ ಕಳವಳ ಬೇರೆ ಇದೆ. ಈ ಮಧ್ಯೆ ಸರ್ಕಾರದವರಿಗೆ ಅವರು ಎಲ್ಲಿ ಸೋತು ಹೋಗುತ್ತೇವೋ ಎಂಬ ಭಯ ಬೇರೆ ಇದೆ. ನನ್ನ ಸ್ನೇಹಿತರಾದ ಶ್ರೀ ಕೃಷ್ಣ ಅವರು ಸ್ಟೇಟ್‌ಮೆಂಟ್ ಕೊಟ್ಟಹಾಗೆ ನಾನು ಕೂಡ ಹೇಳಿ ದ್ದೇನೆ. ಇವತ್ತು ಯಾವ ತರಹ ಈ ಬಗ್ಗೆ ಅಪಪ್ರಚಾರ ಕೈಕೊಳ್ಳದೆ ಕ್ಷಿಪ್ರದಲ್ಲಿಯೇ ಈ ಚುನಾವಣೆ ಗಳು ನಡೆಯಬೇಕು. ಇನ್ನು 3 ವರ್ಷಗಳಾದನಂತರ ಈ ಕಾನೂನನ್ನು ಪಾಸ್ ಮಾಡಿಸಲು ಅದಕ್ಕಾಗಿ ಇದನ್ನು ಒಂದು ವರ್ಷಕಾಲ ಮುಂದುವರಿಸಬಾರದೆಂದು ನನ್ನ ಉದ್ದೇಶ. ಈ ರೀತಿ ಯಾಗಿ ಮೇಲಿಂದ ಮೇಲೆ ಈ ಮಸೂದೆಗಳಿಗೆ ತಿದ್ದುಪಡಿಗಳನ್ನು ತರುವುದು ಈಗಿನ ಮೈಸೂರು ರಾಜ್ಯದಲ್ಲಿ ಒಂದು ಹೊಸ ಪದ್ಧತಿಯಾಗಿದೆ. ಯಾವ ರಾಜ್ಯದಲ್ಲೂ ಈ ರೀತಿ ಮೇಲಿಂದ ಮೇಲೆ ತಿದ್ದುಪಡಿಗಳನ್ನು ತರುವ ಅಭಿಪ್ರಾಯವಿಲ್ಲ. ಈ ರೀತಿ ಒಂದು ಮಸೂದೆಯ ಮೇಲೆ ಮೇಲಿಂದ ಮೇಲೆ ತಿದ್ದುಪಡಿಗಳನ್ನು ಸರ್ಕಾರದವರೇ ತರುತ್ತಿದ್ದರೆ ವಿರೋಧ ಪಕ್ಷದವರು ವಿಶೇಷವಾಗಿ ಟೀಕೆ ಮಾಡುವುದು ಅವರ ಕರ್ತವ್ಯವೆಂದು ನಾನು ಹೇಳುತ್ತೇನೆ. ಪೂರ್ವ ಭಾವಿಯಾಗಿಯೇ ಈ ಚುನಾ ವಣೆಗಳ ಸಿದ್ಧತೆಗಳನ್ನು ಏಕೆ ಮಾಡಲಿಲ್ಲ? ನಿಮ್ಮ ಮೇಲೆ ಜನಗಳಿಗೆ ಎಷ್ಟರಮಟ್ಟಿಗೆ ನಂಬಿಕೆ ಬಂದೀತು, ಹಳೆಯ ಆಕ್ಟ್ ಪ್ರಕಾರವೇ ಈ ಮಸೂದೆಯನ್ನು ಪಾಸ್ ಮಾಡಿದರೆ ಸರ್ಕಾರದವರಿಗೆ ಇರತಕ್ಕ ತೊಂದರೆಯಾದರೂ ಏನು? ಆದ್ದರಿಂದ ಮುಂದಿನ ಜನವರಿಯವರೆಗೆ ಈ ಚುನಾವಣೆಯನ್ನು ಮುಂದೂಡುವ ಪ್ರಮೇಯವೇನೂ ಇಲ್ಲ. ಅದಾದನಂತರ ಪುನಃ ಜನರಲ್ ಎಲೆಕ್ಷನ್. ಹೀಗೆ ವರ್ಷಾನುಗಟ್ಟಲೆ ಚುನಾವಣೆಗಳ ಸುರಿ ಮಳೆ ಬರುವಾಗ ಅಂತಹ ಹೊತ್ತಿನಲ್ಲಿ ಈ ಚುನಾವಣೆ ಗಳನ್ನು ಮಾಡಬಾರದು. ಸಂಬಂಧಪಟ್ಟ ಮಂತ್ರಿಗಳಿಗೆ ಈಗ ಒಂದು ಮಾತನ್ನು ಹೇಳಬೇಕಾಗಿದೆ. ಈಗ ದೇಶದ ಮುಂದೆ ಬಿಕ್ಕಟ್ಟು ಬಹಳ ಇದೆ. ಇಂತಹ ಸಂದರ್ಭದಲ್ಲಿ ಕೇಂದ್ರದಿಂದ ಅಷ್ಟಾಗಿ ಬೇರೆ ರೀತಿಯಿಂದ ಸಹಾಯ ದೊರಕುತ್ತಾ ಇಲ್ಲವೆಂದು ಅವರೇ ಹೇಳುತ್ತಿದ್ದಾರೆ. ಆದ್ದರಿಂದ ಈ ರೀತಿಯಾಗಿ ತಿದ್ದುಪಡಿಗಳನ್ನು ತಂದು ಈ ಮಸೂದೆಯನ್ನು ಪಾಸ್ ಮಾಡುವುದರಿಂದ ಬಹಳ ಕಷ್ಟ ದಾಯಕವಾದ ಪರಿಸ್ಥಿತಿ ಉಂಟಾಗುತ್ತದೆ. ಅದಕ್ಕಾಗಿ ಈ ತಿದ್ದುಪಡಿಯನ್ನು ಡ್ರಾಪ್‌ಮಾಡಿ ಹಳೆಯ ಆಕ್ಟ್ ಪ್ರಕಾರ ಈ ಕಾನೂನನ್ನು ಮುಂದುವರಿಸಿಕೊಂಡು ಹೋಗಬೇಕೆಂದು ನಾನು ಸಲಹೆ ಮಾಡುತ್ತೇನೆ.

5-30 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಒಂದು ವಿಚಿತ್ರವಾದ ಸಂಗತಿ ನಮ್ಮ ಮೈಸೂರು ರಾಜ್ಯದಲ್ಲಿ ನಡೆಯುತ್ತಿದೆ. ಇಲ್ಲಿ ಈಗ ಯಾವ ಕೆಲಸ ಕಾರ್ಯಗಳೂ ನಡೆಯುತ್ತಿಲ್ಲ. ಅಧಿಕಾರಕ್ಕೆ ಅಂಟಿ ಕೊಂಡಿರಬೇಕು, ಅಧಿಕಾರ ತಮ್ಮ ಕೈಯಲ್ಲಿ ಇರಬೇಕು, ತಾವು ಆ ಜಾಗವನ್ನು ಬಿಟ್ಟು ಹೋಗಬಾರದು ಎಂದು ನಿರ್ಧಾರವಾಗಿ ಕಾಂಗ್ರೆಸ್ಸಿನವರು ತೀರ್ಮಾನ ಮಾಡಿಕೊಂಡಿ

ದ್ದಾರೆ. ಈ ಮೈಸೂರು ವಿಲೇಜ್ ಪಂಚಾಯತಿ ಅಂಡ್ ಲೋಕಲ್ ಬೋರ್ಡ್ಸ್ ಮಸೂದೆಗೆ ಮೈಸೂರು ಸಂಸ್ಥಾನದಲ್ಲಿ ಇವೊತ್ತು 6 ತಿಂಗಳು ಜೀವದಾನ ಮಾಡಬೇಕು, ಇದರ ಅವಧಿಯನ್ನು 6 ತಿಂಗಳು ಎಕ್ಸ್‌ಟೆಂಡ್ ಮಾಡಬೇಕೆಂದು ಈ ಒಂದು ತಿದ್ದುಪಡಿಯನ್ನು ಈ ಸಭೆಯ ಮುಂದೆ ತಂದಿದ್ದಾರೆ. ಈ ಮಸೂದೆಯ ಒರಿಜನಲ್ ಆಕ್ಟ್ ಈ ಸಭೆಯಲ್ಲಿ ಪಾಸಾದಾಗ ಆಗ ಅಧಿಕಾರದಲ್ಲಿ ಇಲ್ಲದೆ ಇದ್ದ ನನ್ನ ಸ್ನೇಹಿತರಾದ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆ ಅವರು 3 ವರ್ಷದ ಮೇಲೆ ತಾಲ್ಲೂಕು ಬೋರ್ಡ್ ಮತ್ತು ಪಂಚಾಯತಿಗಳು ಅಧಿಕಾರದಲ್ಲಿ ಇರಬಾರದು, 3 ವರ್ಷಕ್ಕೆ ಒಂದು ಸಾರಿ ಅವುಗಳ ಚುನಾವಣೆ ಆಗಬೇಕು ಎಂದು ಹೇಳಿದ್ದರು. ಆಗ ಶ್ರೀಮಾನ್ ಜತ್ತಿಯವರು ಮುಖ್ಯ ಮಂತ್ರಿಗಳಾಗಿದ್ದರು. ಆಗ ಅವರು ಅದನ್ನು ನಾಲ್ಕು ವರ್ಷಮಾಡಿ ನಾಲ್ಕು ವರ್ಷಕ್ಕೆ ಒಂದು ಸಾರಿ ಚುನಾವಣೆ ಆಗುತ್ತದೆ, ಅದಕ್ಕೆ ಮುಂದೆ ಹೋಗುವುದಿಲ್ಲ ಎಂದು ಹೇಳಿದರು. ಇವೊತ್ತಿನ ಹಣ ಕಾಸಿನ ಮಂತ್ರಿಗಳಾಗಿರತಕ್ಕ ಶ್ರೀಮಾನ್ ಜತ್ತಿಯವರು ಈ ತಿದ್ದುಪಡಿ ಮಸೂದೆಯನ್ನು ಈ ಸಭೆಯ ಮುಂದೆ ತಂದು ಈ ಮಸೂದೆಯ ಕ್ಲಾಜ್ 24ರಲ್ಲಿ ಏನು ಹೇಳುತ್ತಿದ್ದಾರೆಂದರೆ "Provided that the Government may, by notification for reasons to be stated therein, extend from time to time the said term for a period not exceeding five years in the aggregate" ಎಂದು ಮಾಡುತ್ತಿದ್ದಾರೆ. 50 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ಸಮಿತಿಯನ್ನು ನೇಮಕಮಾಡಿ ಅವರು ಈ ದೇಶದಲ್ಲೆಲ್ಲಾ ತಿರುಗಾಡಿಕೊಂಡು ಬಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟ ಮೇಲೆ, ಈ ಪಂಚಾಯತ್ ರಾಜ್ಯದ ಬಿಲ್ ಡ್ರಾಫ್ಟ್ ಮಾಡುವುದಕ್ಕೆ ಒಬ್ಬ ಆಧಿಕಾರಿಗಳಿಗೆ ಎಕ್ಸ್‌ಟೆನ್‌ಷನ್ ಕೊಟ್ಟರು. ಈ ಬಿಲ್ಲು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರು. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಪರಿಶೀಲನೆ ಮಾಡುವುದಕ್ಕೆ 25 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರು. ಅಂತೂ ಒಟ್ಟಿನಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಪಂಚಾಯತಿ ರಾಜ್ಯ ಮಸೂದೆಯನ್ನು ಈ ಸಭೆಯಲ್ಲಿ ತಂದು ಪಾಸ್‌ಮಾಡಿ ಅದನ್ನು ಕಾನೂನು ಮಾಡಿ ಅದರ ಪ್ರಕಾರ ಚುನಾವಣೆಯನ್ನು ನಡೆಸುತ್ತೇವೆ ಎಂದು ಹೇಳಿದಂತಹ ಜನ ಇವೊತ್ತು ಇವರ ಮನಸ್ಸಿಗೆ ಬಂದಂತೆ ವ್ಯವಹಾರ ಮಾಡುತ್ತಿದ್ದಾರೆ ಯಾವ ಭಾಷೆಯಲ್ಲಿ ಇವರನ್ನು ಕರೆಯಬೇಕೋ ನನಗಂತೂ ಗೊತ್ತಾಗುವುದಿಲ್ಲ. ಭೂಸುಧಾರಣೆ ಆಗಬೇಕೆಂದು ಲ್ಯಾಂಡ್ ರಿಫಾರಮ್ಸ್ ಆಕ್ಟ್‌ನ್ನು ಮಾಡಿದರು ಅದು ಇವೊತ್ತು ಕೋರ್ಟ್ ಸ್ಟೋರ್ಜಿನಲ್ಲದೆ. ಆ ಮೇಲೆ ಅಬಾಲಿಷ್ ಆಫ್ ಹೆರೆಡಿಟರಿ ವಿಲೇಜ್ ಆಫೀಸರ್ಸ್ ಬಿಲ್ಲನ್ನು ಈ ಸಭೆಯಲ್ಲಿ ತಂದು ಅದನ್ನು ಪಾಸುಮಾಡಿ ಹಾಗೆಯೇ ಇಟ್ಟಿದ್ದಾರೆ. ಈ ರೀತಿ ಇವರು ಈ ಸಭೆಯಲ್ಲಿ ಮಾಡಿದಂತಹ ಕಾನೂನುಗಳನ್ನು ಇಂಪ್ಲಿಮೆಂಟ್ ಮಾಡದೇ ಹೋದರೆ ನಿಮ್ಮ ಕೈಯಲ್ಲಿ ಇನ್ನೇನು ಮಾಡುವುದಕ್ಕೆ ಸಾಧ್ಯ? ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಪಂಚಾಯತಿ ರಾಜ್ಯ ಮಸೂದೆಯನ್ನು ತಯಾರು ಮಾಡಿ ಅದನ್ನು ಈ ಸಭೆಯಲ್ಲಿ ತಂದು ಪಾಸ್‌ಮಾಡಿ ಅದನ್ನು ಕಾನೂನು ಮಾಡಿ ಅದರ ಪ್ರಕಾರ ಚುನಾವಣೆಯನ್ನು ನಡೆಸದೆ ಏನೇನೋ ನೆಪಗಳನ್ನು ಹೇಳುತ್ತಿದ್ದೀರಿ, ಈ ಮಸೂದೆಯನ್ನು ನಿಮ್ಮ ಪಾರ್ಟಿಯಲ್ಲಿ ತಂದು ಆ ಬಗ್ಗೆ ತೀರ್ಮಾನವನ್ನು ತಗೆದುಕೊಳ್ಳುವುದಕ್ಕೆ ಸಾಧ್ಯವಾಗಲಲ್ಲ ಎಂದು ಹೇಳುವುದಕ್ಕೆ ಮನಸ್ಸು ಇಲ್ಲದೆ, ಮುಖ ಇಲ್ಲದೆ ಏನೇನೋ ನೆಪಗಳನ್ನು ಹೇಳುತ್ತಿದ್ದಾರೆ. ಆಹಾರದ ಪರಿಸ್ಥಿತಿ ಹದಗೆಟ್ಟಿರುವಾಗ, ಹಣಕಾಸಿನ ಪರಿಸ್ಥಿತಿ ಹದಗೆಟ್ಟಿರುವಾಗ, ಇವೊತ್ತಿನ ದಿವಸ ಪಂಚಾಯತಿ ಮತ್ತು ತಾಲ್ಲೂಕು ಬೋರ್ಡುಗಳ ಚುನಾವಣೆಯನ್ನು ನಡೆಸಿದರೆ ಚುನಾವಣೆಯಲ್ಲಿ ಏನಾಗುತ್ತದೋ ಎಂದು ಇದನ್ನು ಮುಂದೂಡುತ್ತಿರುವುದು ಸರಿಯಲ್ಲ. ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಲು ತಮಗೆ ಅಧಿಕಾರ ಇದೆ, ನಮ್ಮ ಕಡೆ 140 ಜನಗಳಿದ್ದೇವೆ, ನಾವು ಹೇಳಿದಹಾಗೆ ಎಲ್ಲವೂ

(ಶ್ರೀ ಸಿ. ಜೆ· ಮುಕ್ಕಣ್ಣಪ್ಪ)

ಎಷ್ಟರಮಟ್ಟಿಗೆ ವ್ಯವಹಾರವನ್ನು ಮಾಡುತ್ತಿವೆ ಎಂಬುದನ್ನು ನೋಡಿದರೆ, ಅಲ್ಲ ನೆಡೆಯತಕ್ಕಂಥ ಕಸಿ ಬಿಸಿ, ಅಧ್ಯಾನವನ್ನು ನೋಡಿದರೆ ಇವುಗಳನ್ನು ಒಂದು ಅರಗಳಿಗೆ ಕೂಡ ಇಟ್ಟುಕೊಳ್ಳುವುದು ಸಾಧುವಲ್ಲ. ಇದಕ್ಕೆ ಒಂದು ಪ್ರತ್ಯೇಕ ಸ್ಯಾಚ್ಯೂಟ್ ಮಾಡಿ ಒಬ್ಬ ಅಧಿಕಾರಿಗೆ ಇವುಗಳ ಜವಾಬ್ದಾರಿಯನ್ನು ಪಹಿಸುವುದು ಮೇಲು ಎಂದು ನನಗೆನ್ನಿಸುತ್ತದೆ. ಚುನಾವಣೆಯಲ್ಲ ಜನತೆಯನ್ನು ಎದುರಿಸುವುದಕ್ಕೆ ಶಕ್ತಿ ಇಲ್ಲದೆ ಈ ಮೈಸೂರು ವಿಲೇಜ್ ಪಂಚಾಯಿತಿ ಆಂಡ್ ಲೋಕಲ್ ಬೋರ್ಡ್ಸ್‌ಬಿಲ್ಲಗೆ ಒಂದು ಅಮೆಂಡ್‌ಮೆಂಟ್ ತಂದು ಇದಕ್ಕೆ ಜೀವದಾನವನ್ನು ಕೊಡಿ ಎಂದು ಹೇಳತಕ್ಕಾಂಥದ್ದು ಧರ್ಮಕ್ಕೆ ವಿರುದ್ಧವಾದದ್ದು, ನೀವು ಪ್ರಜಾಪ್ರಭುತ್ವಕ್ಕೆ ತಿಲಾಂಜಲಿಯನ್ನು ಬಿಡುತ್ತಿದ್ದೀರಿ, ನೀವು ಪ್ರಜಾಪ್ರಭುತ್ವ ನೀತಿಯನ್ನು ಗಾಳಿಗೆ ತೂರಿಸಿ ನಿಮ್ಮ ಮನಸ್ಸಿಗೆ ಬಂದ ಹಾಗೆ ಅಧಿಕಾರವನ್ನು ಮಾಡುತ್ತಿದ್ದೀರಿ, ಇದರಿಂದ ಪ್ರಜಾಪ್ರಭತ್ವ ಉಳಿಯುವುದಿಲ್ಲ, ಆದ್ದರಿಂದ ಅಡಳಿತ ಪಕ್ಷದವರು ಆದಷ್ಟು ಬೇಗ, ಶೀಘ್ರವಾಗಿ ಅಧಿಕಾರದಿಂದ ನಿರ್ಗಮಿಸಿದರೆ ಅದರಿಂದ ದೇಶಕ್ಕೆ ಕಲ್ಯಾಣ ವಾಗುತ್ತದೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† **Sri G. V. GOWDA.**—Mr. Speaker, I venture to state that proposed amendment to sections 24 and 108 provisos to the Mysore Village Panchayats and Local Boards Act, 1959 is uncalled for, unwarranted and frivolous. I oppose this amendment for two reasons. Already in the original Act there was a proviso which provides for extension of period from 4 years to five years by the Government. The Government or the excutive authority is empowered to extend the period over and above the period fixed in the statute. Now it is sought to be raised by another year; two years over and above the statutory period of 4 years. That means 50 per cent increase by way of extension, is it correct? If we can analyse on the principle of natural justice is it advisable for the Government to take authority for extending the period recognised in the statute by another 50 per cent. We know that even Government officers who put in 28 or 30 years service, if they are able and fit, their services would be extended by two or three years or 5 years at the most. It works to 10 per cent. We can go to the extent of 25 per cent in this case. But now they are seeking to take authority to extend the period by 50 per cent. This is most unrealistic and detrimental to the very principle of democracy. If the Government had amended, I would have seriously asked the Finance Minister, whether it would not be possible to consider the Panchayat Raj Bill on the 15th of this month and pass. If they had amended they could have allowed 5 to 6 days at least.

Mr. SPEAKER.—Which are those 5 to 6 days?.

Sri G. V. GOWDA.—Was it necessary for the Library Bill to get passed?

Mr. SPEAKER.—All that from the Hon'ble Member, who got the time extended, got the benefit and participated in the Debate!

Sri G. V. GOWDA.—Because, it was placed for the consideration of the House, we had to participate and we had to request the Chair to extend the time. What I want to ask is whether thes Bills, namely, the Library Bill and University Bill, are indispensable. They might have been deferred. They were not so indispensible. That is my submission. As Sri C. J. Muckannappa stated, what an amount of money we have spent on these Bills!

Mr. SPEAKER.—Does the member support his statement about 2 lakhs ?

Sri G. V. GOWDA.—It may not be 2 lakhs. It is an enormous sum. We had 3 or 4 Panchayat Seminars in the State. In several Seminars, several suggestions have been made. A comprehensive Bill is necessary to strengthen the functions of the Panchayats. I may recall the statement of Mr. Dey who had stated that there was no Panchayat Raj in our Mysore State. The Government of Mysore opened their eyes and felt the necessity of appointing a Committee under the Presidentship of Sri Kondajji Bassappa. The Committee toured and gave a report which was not discussed. Let it go. Then it was referred to a Joint Select Committee and then introduced here. All these things have taken place. The Government knows how Panchayats are working. There is much confusion in their working. They have no Secretaries. They have no sufficient finance. Most of the Panchayats have not framed their annual Budget. The Supervisory Officers have no interest to guide these Panchayats. These expert Officers have not helped them in their working. There is no strict control over them. We have not been able to see a report as to how these Panchayats are working for the last 4 or 5 years. This House has not seen such report even once. We have not even considered the reports on the District Councils. We wanted to see how progressive ideas have been implemented. If the Government had requested the members, we were prepared to extend the Assembly by 3 or 4 days. I do not want to atribute any ulterior motive. I do not know whether the Bill is drafted is going to be accepted or it will go up with modifications here and there. If their intention is to see that some change is necessary, I don't think it is admissable in law. When once Joint Select Committee makes a report in that regard, two years extension, by 50 per cent—all that recognised under the statute is very bad, not only legally and morally and it is incompatible with any principle. Government might take one year under this law. It is not binding that they should have one year to conduct elections as early as possible. Let them take steps to conduct elections under the existing enactment as early as possible, because, it might clash with the general election in 1967. There should be as much gap as possible between two elections. It is not safe for the Government to ask this House to extend the period by another year. That is not fair in any sense of the term. May I appeal to the Minister to see at the latest, the elections may be held in the month of June and before the rainy season starts so that there may be sufficient gap between the two elections ?

Mr. SPEAKER.—Kindly say something new.

†ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೆ, ಹೊಸ ನೀತಿ ಏನು ಹೇಳುವುದು ? ಈಗ ಏನಾಗಿದೆಯೆಂದರೆ, ಇವರ ಸಂಖ್ಯಾಬಲ ಹೆಚ್ಚಿದಷ್ಟೂ, ಇವರ ಧರ್ಮ ತೀರಾ ಮೊಂಡು ಆಗುತ್ತಿದೆ. ನಾವು ಏನು ಹೊಸದು ಹೇಳಿದರೂ ಇವರಿಗೆ ಹಿಡಿಯುವುದಿಲ್ಲ. ನಮ್ಮ ಹಳ್ಳಿ ಕಡೆ ಒಂದು ಗಾದೆ ಹೇಳುತ್ತಾರೆ. 'ಮನೆಗಿಂತ ಗುಡಿ ಭದ್ರ' ಅಂತ. ಮನೆಯಾದರೆ ಸೋರುತ್ತೆ, ಬೆಂಕಿ, ಬಿಸಿಲು, ಗಾಳಿ ಬಾಧೆ ಇರುತ್ತದೆ. ಆದರೆ ಗುಡಿಯಲ್ಲಿ ಭದ್ರವಾಗಿ ಸುಖವಾಗಿರುತ್ತೆ. ಅಧ್ಯಕ್ಷಗಿರಿಯಾಗಲಿ, ಮಿನಿಸ್ಟರಗಿರಿಯಾಗಲಿ, ಏನೊಂದು ಅಧಿಕಾರ ಬಂದರೂ ಅದನ್ನೇ ಖಾಯಂ ಮಾಡಿಕೊಳ್ಳೋಣ ಅಂತ ಯೋಚನೆ ಮಾಡಿ, ಈಗಿರುವ ಪಂಚಾಯತಿ ಮುಂತಾದುವಕ್ಕೆ ಜೀವದಾನ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಕೊಡಿ ಎಂದು ಕೇಳಿಕೊಂಡು ಬಂದಿದ್ದಾರೆ. ಇದಕ್ಕೆ ದೇಶದಲ್ಲಿ ಇಂಥ ಪರಿಸ್ಥಿತಿ ಒದಗಿದೆ, ಜೀವದಾನ ಅನಿವಾರ್ಯ ಅಂತ ಹೇಳಿ ಏನಾದರೂ ಸಕಾರಣಗಳನ್ನು ಕೊಚ್ಚಿದ್ದಾರೆಯೆ ? ಅಜೆಂಡಾದಲ್ಲಿ ಸೇರಿಸಿದ ಮೇಲೆ ಅದನ್ನು ತೆಗೆಯಬೇಕಾದರೆ ತಮ್ಮ ಪರ್ಮಿಶನ್ ತೆಗೆದುಕೊಂಡರೆ, ಇಲ್ಲವೆ ?

Mr. SPEAKER.—This particular member always talks of things not included in the agenda. He goes to a point and says something else. I call upon him to say something on the original aspect.

†ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅವರು ಮಾಡಿದ್ದೇ ಮಾಡಿದರೆ ಹೊಸ ವಿಷಯ ಏನು ಹೇಳುವುದು ? ಹೇಳಿದ್ದೇ ಹೇಳಬೇಕಾಗುತ್ತದೆ. ಅವರು ನಾವು ಹೇಳಿದ್ದರಲ್ಲಿ, ಯಾವುದಾದರೂ ಒಂದೆರಡರಲ್ಲಿ ತಿದ್ದಿಕೊಂಡರೆ, we shall try to give some new points. ಬೇಕಾದಷ್ಟು ಪಂಚಾಯತಿ ಅಧ್ಯಕ್ಷರು ಮತ್ತು ತಾಲ್ಲೂಕು ಬೋರ್ಡು ಅಧ್ಯಕ್ಷರುಗಳು ಹಣ ದುರುಪಯೋಗ ಮಾಡಿದ್ದಾರೆ, ಹಣ ತಿಂದಿದ್ದಾರೆ ಎಂದು ಅವರ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸುವುದರಲ್ಲಿದ್ದೆವು. ಆದರೆ ಇನ್ನು ಒಂದೆರಡು ತಿಂಗಳಲ್ಲಿ ಅವರ ಅಧಿಕಾರಾವಧಿ ಆಗಿಹೋಗಿ ಅವರು ಮನೆಗೆ ಹೋಗುತ್ತಾರೆ ಅಂತ ಅವರ ಮೇಲೆ ಕ್ರಮ ತೆಗೆದುಕೊಂಡಿರಲಿಲ್ಲ. ಅವರು ಅಧಿಕಾರ ದುರುಪಯೋಗ ಪಡಿಸಿಕೊಂಡು ಬೇಕಾದಷ್ಟು ರೈಸೆನ್ನು, ಸೈಟುಗಳು ಮುಂತಾದುವನ್ನು ಪಡೆದಿದ್ದರೂ, ಅವರ ಮೇಲೆ ಅವಿಶ್ವಾಸ ನಿರ್ಣಯ ತಂದು ಏಕೆ ಹೊರಗೆ ಕಳುಹಿಸಬೇಕು, ಇನ್ನೆರಡು ತಿಂಗಳಲ್ಲಿ ವಿಶ್ವಾಸದಿಂದಲೇ ಮನೆಗೆ ಕಳುಹಿಸೋಣವೆಂದಿದ್ದರೆ, ಅವರನ್ನೇ ಇನ್ನೂ ಉಳಿಸಿಕೊಂಡು ಇರಬೇಕೆಂದರೆ ಏನು ಮಾಡಬೇಕು ? ಮೊದಲು ಏನು ವಾಗಿದ್ದು ? ಮೊದಲನೆ ಮಂತ್ರಿಮಂಡಲದಲ್ಲಿ ನಿಜಲಿಂಗಪ್ಪ ಸರಕಾರದಲ್ಲಿ ಜತ್ತಿಯವರಿಗೆ ಸ್ಥಾನ ಕೊಡುವುದಕ್ಕಾಗುವುದಿಲ್ಲವೆಂದರು. ಆವಾಗ ಏನು ಮಾಡಿದರು ?

Mr. SPEAKER.—Why am I ringing the Bell. He should stop speaking on matters not connected with the Bill.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಯಾವಾಗಲೂ ಗಂಟೆ ಹೊಡಿಯುವ ದೇವಸ್ಥಾನಕ್ಕೆ ಯಾರೂ ಹೋಗುವುದಿಲ್ಲ.

ರಿಪೋರ್ಟುಗಳು ಬಂದಮೇಲೆ ಅವು ಕಾರ್ಯಗತವಾಗುವುದಿಲ್ಲ. ತಮಗೆ ಅರ್ಥವಾಗಿಲ್ಲ. ತಮಗೆ ಉದಾಹರಣೆ ಹೇಳುತ್ತೇನೆ.

Mr. SPEAKER.—What is that ?

ಶ್ರೀ ಕೆ. ಪಿ. ರೇವಣಸಿದ್ದಪ್ಪ : * * * * * *

Mr. SPEAKER.—I am directing it to be expunged.

†ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಾವು ಹೇಳುವುದರಲ್ಲಿ ಏನೂ ಇಲ್ಲ ಎಂದು ಹೇಳಿದರೆ ಹೇಗೆ ? ಸರ್ಕಾರಕ್ಕೆ ನಾನು ಹೇಳುವುದಿಷ್ಟು : ನಾವು ಇಲ್ಲಿಯವರೆಗೆ ಏನೇನನ್ನು ಹೇಳಿದ್ದೇವೋ ಅದರ ಬಗ್ಗೆ ರಿಕಾರ್ಡುಗಳನ್ನು ತರಿಸಿಕೊಂಡು ತಾವು ಇಲ್ಲಿ ಭರವಸೆ ಕೊಟ್ಟಿರುವಂತೆ ದಿನೇ ದಿನೇ ನಡೆಯುವ ಕೆಲಸಗಳೆಲ್ಲಾ ಕಾರ್ಯಗತವಾಗುತ್ತಿದೆಯೇ ಇಲ್ಲವೇ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ನಾವು ಮೊನ್ನೆ ತಾನೇ ಅವಿಶ್ವಾಸ ನಿರ್ಣಯ ತಂದದ್ದು ನಿಮ್ಮನ್ನು ತೆಗೆಯಬೇಕೆಂದು ನಮ್ಮ ಉದ್ದೇಶವಲ್ಲ. ಹೊಸದಾಗಿ ಬಂದಿರುವ ಪ್ರಜಾಪ್ರಭುತ್ವದಲ್ಲಿ ನಿಮಗೆ ನಂಬಿಕೆ ಇದ್ದಿದ್ದರೆ ಪದೇ ಪದೇ ಇಂತಹ ಅಮೆಂಡ್‌ಮೆಂಟುಗಳನ್ನು ನೀವು ತರುತ್ತಿರಲಿಲ್ಲ. ನೀವುಗಳೆಲ್ಲ ಸುಮ್ಮನೆ ಮಂತ್ರಿಗಳಾಗಿ ಇಲ್ಲಿ ಕುಳಿತುಕೊಂಡು ನಿಮಗೆ ಬರುವ ಸಂಬಳವನ್ನು ಪಡೆದುಕೊಂಡು, ನಿಮ್ಮ ಕೈಕೆಳಗೆ ಡೆಪ್ಯುಟಿ ಮಿನಿಸ್ಟರುಗಳು ಮತ್ತು ಪಾರ್ಲಿಮೆಂಟರಿ ಸೆಕ್ರಟರಿಗಳೆಂದು ನೇಮಕ ಮಾಡಿಕೊಂಡು ಯಾವುದರ ಕಡೆಗೂ ಲಕ್ಷ್ಯ ಕೊಡದೆ ಎಲೆಕ್ಷನ್ನುಗಳನ್ನು ಈಗ ನಡೆಸದೇ ಇದ್ದರೂ ಪರವಾಗಿಲ್ಲ ಇನ್ನು ಐದಾರು ವರ್ಷಗಳನಂತರ ನಡೆಸಬಹುದು ಎಂದು.....

(Interruption)

ತಾಲ್ಲೂಕು ಬೋರ್ಡು ಹಾಗೂ ಪಂಚಾಯತಿ ಎಲೆಕ್ಷನ್ನುಗಳನ್ನು ನಡೆಸುವುದಾದರೂ ಏತಕ್ಕೆ ಎಂದು ಸರ್ಕಾರದವರು ತಿಳಿದುಕೊಂಡಿದ್ದಾರೋ ಏನೋ ಗೊತ್ತಿಲ್ಲ. ಇನ್ನೇನು ಎಲ್ಲ ಪಂಚಾಯತಿಗಳಿಗೂ ಎಲೆಕ್ಷನ್ನುಗಳನ್ನು ನಡೆಸುತ್ತೇವೆಂದು ಹೇಳುತ್ತಿದ್ದವರು ಇಪ್ಪತ್ತು ಇಂತಹ ಅಮೆಂಡ್‌ಮೆಂಟು ಬಿಲ್ಲನ್ನೇತಕ್ಕೆ ತಂದಿದ್ದಾರೆ ಎಂದರೆ, ಎಲ್ಲ ಪಂಚಾಯತಿಗಳಲ್ಲಿರುವ ಇವರ ಸ್ನೇಹಿತರುಗಳು ಕೆಲಸ

****** Matter expunged as ordered by the Speaker

ಮಾಡಿ ಮಾಡಿ ಬೇಸತ್ತಿದ್ದಾರೆಂದು ಇವರಿಗೆ ಸ್ವಲ್ಪ ರಿಲೀಫ್ ಕೊಡೋಣ ಎಂದು ಇಂತಹ ಅಮೆಂಡ್‌ಮೆಂಟು ಬಿಲ್ಲುಗಳನ್ನು ತರುತ್ತಿದ್ದಾರೆ. ಈ ದೇಶದಲ್ಲಿ ನಿಮ್ಮನ್ನು ಯಾರೂ ಕೇಳುವವರಿಲ್ಲ ಎಂದು ನಿಮಗೆ ಬೇಕಾದವರನ್ನು ತಾಲ್ಲೂಕು ಬೋರ್ಡುಗಳ ಅಧ್ಯಕ್ಷರನ್ನಾಗಿ ಮಾಡಿ ಅವರ ಕಾಲದಲ್ಲಿ ಏನೋ ಅಷ್ಟು ಇಷ್ಟು ಮಾಡಿಕೊಂಡಮೇಲೆ ಇನ್ನೊಬ್ಬರು ಅಧ್ಯಕ್ಷರಾಗಿ ಬಂದಾಗ ಅವರೂ ಮಾಡುವುದು ಎಂದು ಹೀಗೆ ಮಾಡಿದರೆ ಇದು ಸೋಷಿಯಲಿಸ್ಟಿಕ್ ಪ್ಯಾಟರ್ನ್ ಎಂದು ಅವರನ್ನು ಕೇಳಬೇಕಾಗಿದೆ. ಇಂತಹ ಒಂದು ವಾದವನ್ನು ಮಾಡುವುದು ಸರಿಯಲ್ಲ ಎಂದು ಇಷ್ಟು ಹೇಳಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ತಂದಿರತಕ್ಕ ಈ ತಿದ್ದುಪಡಿ ಮಸೂದೆಯನ್ನು ವಿರೋಧ ಮಾಡುತ್ತ ಮಾನ್ಯ ಮಂತ್ರಿಗಳ ಗಮನಕ್ಕೆ ಒಂದೆರಡು ವಿಷಯುಗಳನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. ಈ ಸಭೆಯಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಮಾತನಾಡಿರುವ ವಿಷಯಗಳನ್ನು ನಾನೂ ಹೇಳುವುದಾದರೆ, ಅದು ರಿಪಿಟಿಷನ್ನು ಮಾಡಿದಂತಾಗುತ್ತದೆ ಎಂದು, ಅವರುಗಳು ತಿಳಿಸಿದ್ದೇ ಇರತಕ್ಕ ಒಂದೆರಡು ಮಾತುಗಳನ್ನು ಮಾತ್ರ ಇಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಪಂಚಾಯತಿ ರಾಜ್ಯದ ಆಡಳಿತ ಹೇಗೆ ನಡೆಯುತ್ತದೆ ಎನ್ನುವುದರ ಬಗ್ಗೆ ವರದಿಯನ್ನು ಕೊಡಲು ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ ಅವರು ಕೊಟ್ಟ ರಿಪೋರ್ಟನ್ನು ಈ ಸಭೆಯ ಮುಂದಿಟ್ಟು ಚರ್ಚೆ ಮಾಡಲು ಅವಕಾಶವನ್ನು ಕೂಡ ಕೊಡಲಿಲ್ಲ. ಅನಂತರದಲ್ಲಿ ಪಂಚಾಯತಿ ರಾಜ್ಯಗಳ ಮಸೂದೆ ಎಂದು ಈ ಸಭೆಯಲ್ಲಿ ತಂದು ಅವಸರವಸರವಾಗಿ ಅದನ್ನು ಪಾಯಿಂಟು ಸೆಲೆಕ್ಟು ಕಮಿಟಿಗೆ ಕಳುಹಿಸಿಕೊಟ್ಟರು ಮತ್ತು ಆಗ ಪಂಚಾಯತಿ ಮಸೂದೆಯನ್ನು ಈ ಸಭೆಗೆ ತಂದು ಆದಷ್ಟು ಬೇಗ ಜಾರಿಗೆ ತರಬೇಕೆಂದು ಬಹಳ ದೊಡ್ಡದಾಗಿ ಪಂಚಾಯತಿಗಳ ಆಡಳಿತವನ್ನು ಸುಧಾರಿಸಿ ಅಲ್ಲಿಗೆಲ್ಲ ಚುನಾವಣೆಗಳು ನಡೆಯುವಂತೆ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟು ಹೇಳಿದ ಮಂತ್ರಿಗಳು ಇಂದು ಈ ಸಭೆಯಲ್ಲಿಲ್ಲ. ಆದರೆ ಈಗ ಒಂದು ತರಹ ರಾಗ ಎಳೆಯುತ್ತ ಬಂದು ಮೊದಲು ತಂದಿರುವ ರಿಪೋರ್ಟುಗಳಲ್ಲಿ ಸ್ವಲ್ಪ ತೊಂದರೆಗಳಿವೆ ಮತ್ತು ಚುನಾವಣೆಗಳನ್ನು ಈಗ ನಡೆಸಿದರೆ ಪಂಚಾಯತಿಗಳಲ್ಲಿ ಏನೋ ಒಂದು ತರಹದ ಗೊಂದಲಕ್ಕೆ ಸಿಕ್ಕುತ್ತೇವೆ ಎನ್ನುವುದನ್ನು ತೋರಿಸುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸಮಂಜಸವಾದ ಉತ್ತರವನ್ನು ಕೊಡಬೇಕು ಎಂದು ಕೇಳುತ್ತೇನೆ. ಪಂಚಾಯತಿ ಬಿಲ್ಲನ್ನು ತರುವುದಕ್ಕೆ ಮುಂಚೆ ಕೊಂಡಜ್ಜಿ ಬಸಪ್ಪನವರ ಕಮಿಟಿ ರಿಪೋರ್ಟನ್ನು ಈ ಸಭೆಯ ಮುಂದೆ ತಂದು ಚರ್ಚೆ ಮಾಡಿದ್ದರೆ ಅಂತಹ ಏನೂ ಅನಾಹುತವಾಗುತ್ತಿರಲಿಲ್ಲ ಮತ್ತು ಎಲ್ಲ ವ್ಯವಹಾರಗಳೂ ಚೆನ್ನಾಗಿ ನಡೆದುಕೊಂಡು ಹೋಗುತ್ತಿತ್ತು. ಎರಡನೇದಾಗಿ ಈ ಮಾನ್ಯ ಸಭೆಯನ್ನು ಕರೆಯುವುದಾದರೂ ಏತಕ್ಕಾಗಿ ಎಂದರೆ, ಜಾಯಿಂಟು ಸೆಲೆಕ್ಟು ಕಮಿಟಿಯಿಂದ ಬಂದಿರುವ ಪಂಚಾಯತಿ ರಾಜ್ಯದ ಮಸೂದೆಯನ್ನು ಈ ಸಭೆಯಲ್ಲಾ ಚರ್ಚೆ ಮಾಡಬೇಕೆಂದು ಅಜೆಂಡಾದಲ್ಲಿ ಕೂಡ ಹಾಕಿ ನಮಗೆಲ್ಲ ತಿಳುವಳಿಕೆ ಕೊಡಲಾಗಿತ್ತು. ಹೀಗಿರುವಾಗ ಇವೊತ್ತು ಇದನ್ನು ಮುಂದೂಡಬೇಕಾದಂತಹ ಪ್ರಮೇಯವೇನಿತ್ತು ಎನ್ನುವುದನ್ನು ಸರಕಾರದವರಿಂದ ತಿಳಿಯಲು ಅಪೇಕ್ಷೆ ಪಡುತ್ತೇನೆ. ನನಗೆ ತಿಳಿದಿರುವಂತೆ ನಿಮ್ಮ ಪಕ್ಷದೊಳಗೇನೇ ಮತ್ತು ನಿಮ್ಮ ಮಂತ್ರಿಮಂಡಲದಲ್ಲೇ ಇದರ ಬಗ್ಗೆ ಏನೋ ಒಂದು ತರಹದ ಭಿನ್ನಾಭಿಪ್ರಾಯವಿದೆ ಎಂದು ನನಗೆ ತಿಳಿದುಬಂದಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಮುಕ್ಕಣ್ಣಪ್ಪನವರು ಈಗತಾನೇ ಹೇಳಿದ ಹಾಗೆ, ಇದಕ್ಕಾಗಿ ಸುಮಾರು ಎರಡು ಲಕ್ಷ ರೂಪಾಯುಗಳಷ್ಟು ಖರ್ಚು ಸರಕಾರಕ್ಕೆ ಆಗಿದೆ. ಅವರು ಕೊಟ್ಟಿರುವ ಅಂಕೆ ಸಂಖ್ಯೆಗಳು ಅಷ್ಟು ಹೆಚ್ಚಾಗಿಲ್ಲವಿದ್ದರೂ ಸ್ವಲ್ಪಮಟ್ಟಿನ ಹೆಚ್ಚು ಖರ್ಚು ಆಗುತ್ತದೆ, ಇಂತಹ ವಿಷಯದಲ್ಲಿ ಸಾರ್ವಜನಿಕರ ದುಡ್ಡನ್ನು ಖರ್ಚು ಮಾಡಿ ಇಂತಹ ಒಂದು ಮಸೂದೆಯನ್ನು ತಂದಿರತಕ್ಕ ಈ ಕಾಲದಲ್ಲಿ ಇದರ ಪರಿಣಾಮವೇನಾಗುತ್ತದೆ ಎನ್ನುವುದನ್ನು ಸರಕಾರ ಕೂಲಂಕಷವಾಗಿ ಆಲೋಚನೆ ಮಾಡಬೇಕಾಗಿದ್ದು ಅವರ ಕರ್ತವ್ಯವಾಗಿತ್ತು ಎಂದು ನಾನು ಇಲ್ಲಿ ಹೇಳಲಚ್ಚಿನುತ್ತೇನೆ. ಇವೊತ್ತಿನ ದಿನದ ಪರಿಸ್ಥಿತಿಯನ್ನು ನೋಡಿದರೆ ಸರಕಾರದವರು ಪಂಚಾಯತಿಗಳ ಹಾಗೂ ತಾಲ್ಲೂಕು ಬೋರ್ಡುಗಳ ಚುನಾವಣೆಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಇದರಿಂದ ಎದ್ದು ಕಾಣುತ್ತದೆ. ನಾನಾಗಲೇ ಹೇಳಿದ ಹಾಗೆ ಇದನ್ನು ಎರಡು ಸಲ ಮುಂದೂಡಬೇಕೆಂದು ತಿದ್ದುಪಡಿ ತಂದಿದ್ದಾರೆ. ಮೊದಲನೆಯ ಸಾರಿ ತಂದಾಗಲೇ ಅದನ್ನು ವಿರೋಧ ಮಾಡಲಾಗಿತ್ತು, ಈಗ ಎರಡನೆಯ ಸಾರಿ ಚುನಾವಣೆಗಳನ್ನು ಮುಂದೂಡಬೇಕೆಂದು ತಂದಿರುವುದನ್ನು ನೋಡಿದರೆ ಸರಕಾರಕ್ಕೆ ಇದರಲ್ಲಿ ಭಾರಿ ಸೋಲುಂಟಾಗುತ್ತದೆ ಮತ್ತು ಪಂಚಾಯತಿಗಳಿಗೆ ಚುನಾವಣೆಗಳನ್ನು ನಡೆಸುವುದಕ್ಕೆ ಆಗುವುದಿಲ್ಲ ಮತ್ತು ನೇರವಾಗಿ ಪಂಚಾಯತಿಗಳ ಚುನಾವಣೆಗಳನ್ನು ನಡೆಸಲು ನಿಮಗೆ ಶಕ್ತಿ ಇಲ್ಲ. ಏಕೆಂದರೆ ಇವೊತ್ತಿನ ಆಹಾರ ಪರಿಸ್ಥಿತಿ ಹೇಗಿದೆ ಎಂದರೆ ಒಂದು ಕೆ.ಜಿ. ಅಕ್ಕಿ ಕೊಳ್ಳಬೇಕಾದರೆ ಸುಮಾರು ಒಂದು, ಎರಡು ಹಾಗೂ

(ಶ್ರೀ ಎಚ್. ಡಿ. ದೇವೇಗೌಡ)

ಮೂರು ರೂಪಾಯಿಗಳವರೆಗೆ ಜನ ಕೊಡಬೇಕಾಗಿದೆ. ಇದರ ಪರಿಣಾಮ ಜನತೆಯಲ್ಲಿ ಹೆಚಾಚಗುತ್ತ ಹೋಗಿದೆ, ರ್ಯಾಂಡ್ ರೆವೆನ್ಯೂವನ್ನು ಹೆಚ್ಚು ಮಾಡುತ್ತಿದ್ದೀರಿ, ಇದರಿಂದ ಜನತೆಗೆ ಬಹಳ ಕಷ್ಟವಾಗುತ್ತಿದೆ. ಇಂತಹ ಕಷ್ಟದ ಹಾಗೂ ಸಂದಿಗ್ಧ ಪರಿಸ್ಥಿತಿಯಲ್ಲಿ ನೀವುಗಳು ನೇರವಾಗಿ ಜನರ ಸಂಪರ್ಕವನ್ನು ಪಡೆಯುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಇದರಿಂದ ನಿಮಗೆ ಭಾರಿ ಸೋಲುಂಟಾಗುತ್ತೆ ಎನ್ನುವುದು ನಿಮಗೂ ಗೊತ್ತಾಗಿದೆ. ಇದನ್ನು ಮುಂದೂಡುವುದಕ್ಕೆ ಬದಲಾಗಿ ಇನ್ನು ಮೂರು ನಾಲ್ಕು ದಿನಗಳ ಕಾಲ ಈ ಅಧಿವೇಶನವನ್ನು ಹೆಚ್ಚು ಮಾಡಿ ಇಲ್ಲಿ ತಂದಿದ್ದ ಪಂಚಾಯತಿ ರಾಜ್ಯದ ಮಸೂದೆಯನ್ನು ಪಾಸು ಮಾಡಿಸಬಹುದಾಗಿತ್ತು. ಅದನ್ನು ಮಾಡದೇ ಇಂತಹ ಅಮೆಂಡುಮೆಂಟು ಬಿಲ್ಲು ಎಂದು 1959ನೇ ಇಸವಿಯಿಂದಲೂ ತರುತ್ತಲೇ ಇದ್ದಾರೆ. ಇದರಿಂದ ನನಗೇನು ಭಾನವಾಗುತ್ತದೆ ಎಂದರೆ, ಹಿಂದೆ ಇಲ್ಲಿ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟ ಪ್ರಕಾರ ಇಲ್ಲಿಗೆ ಬಂದು ಬಿಲ್ಲನ್ನು ಪಾಸು ಮಾಡಿಸಲಿಲ್ಲ ಮತ್ತು ಕೊಂಡಜ್ಜಿ ಬಸಪ್ಪನವರ ಕಮಿಟಿ ರಿಪೋರ್ಟಿನ್ನೂ ಇಲ್ಲಿ ಚರ್ಚೆ ಮಾಡುವ ಒಂದು ಅವಕಾಶವನ್ನೂ ಕಲ್ಪನೆ ಮಾಡಿ ಕೊಡಲಿಲ್ಲ. ಆ ರಿಪೋರ್ಟನ್ನು ಇಲ್ಲಿ ಚರ್ಚೆ ಮಾಡಿದ್ದರೆ ಏನಾಗುತ್ತಿತ್ತೋ ನನಗೆ ಗೊತ್ತಿಲ್ಲ. ನಿಮ್ಮ ಪಕ್ಷದಲ್ಲೇ ಈ ಬಿಲ್ಲನ್ನು ಪಾಸು ಮಾಡಿಸಲು ಒಮ್ಮತವಿಲ್ಲ ಎಂದು ನನಗೆ ತೋರುತ್ತದೆ. ಇದರಿಂದ ಜನಗಳಲ್ಲಿ ಸರಕಾರದ ಬಗ್ಗೆ ಏನು ಅಭಿಪ್ರಾಯ ಬರುತ್ತದೆ ಎನ್ನುವುದನ್ನು ತಾವೇ ಯೋಚನೆ ಮಾಡಬಹುದು. ಇಂತಹ ಅಮೆಂಡುಮೆಂಟು ಬಿಲ್ಲು ಎಂದು ತರುವುದಕ್ಕಿಂತ ಹೇಯವಾದ ನಿಜವಾಗಿಯೂ ಬೇರೊಂದು ಕೆಲಸ ಈ ಸರಕಾರದಲ್ಲಿ ಇಲ್ಲ ಎಂದು ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಸ್ವಾಮಿ, ಇವೊತ್ತು ಮಸೂದೆಗಳ ಒಂದು ಇತಿಹಾಸದಲ್ಲಿ ಬಹು ದುರದೃಷ್ಟಕರವಾದ ಹಾಗೂ ವಿಷಾದನೀಯವಾದ ದಿವಸವೆಂದು ನಾನು ಭಾವಿಸಬೇಕಾಗಿದೆ.

6-00 P.M.

ಜನತೆಯ ಸರ್ವಾಂಗೀಣ ಉನ್ನತಿಗಾಗಿ ಕೆಲಸ ಮಾಡತಕ್ಕ ಒಂದು ಸಂಸ್ಥೆಯೆಂದರೆ, ಅದು ತಾಲ್ಲೂಕುಬೋರ್ಡು ಮತ್ತು ಗ್ರಾಮಪಂಚಾಯಿತಿ. ಪಂಚಾಯಿತಿ ರಾಜ್ಯದ ಮೂಲಕ ಮತ್ತು ತಾಲ್ಲೂಕು ಬೋರ್ಡಿನ ಮೂಲಕ ಜನತೆಯ ಸರ್ವತೋಮುಖವಾದ ಏಳಿಗೆಯನ್ನು ಸಾಧಿಸುತ್ತೇವೆಂದು ಪಂಚಾಯಿತಿ ರಾಜ್ಯವನ್ನು ಸ್ಥಾಪನೆ ಮಾಡಿದುದಾಯಿತು. ಮಾಡಿದನಂತರ ಅನೇಕ ಪಂಚಾಯಿತಿಗಳು ಹಾಗೂ ತಾಲ್ಲೂಕು ಬೋರ್ಡುಗಳು ಕೋಟಿಗಟ್ಟಲೆ ಹಣವನ್ನು ದುರ್ವಿನಿಯೋಗ ಮಾಡಿದೇಶದ ಅಮೂಲ್ಯವಾದ ಹಣಕ್ಕೆ ಧಕ್ಕೆ ತಂದಿರತಕ್ಕ ಪ್ರಸಂಗಗಳು ನೂರಾರು, ಸಾವಿರಾರು ಸರಕಾರದ ಗಮನಕ್ಕೆ ಬಂದಿವೆ. ಆದರೂ ಕೂಡ, ಸಮತಾವಾದದ ನೀತಿಯನ್ನು ಸರಕಾರ ರೆಕ್ಕೆಕಟ್ಟಿಕೊಂಡಿದೆಯೋ ಏನೋ, ಈ ಒಂದು ಮಸೂದೆಯನ್ನು ತಂದು ಈ ಸಭೆಯ ಅಂಗೀಕಾರ ಪಡೆಯುವುದರ ಬದಲು ಮತ್ತೊಂದು ವರ್ಷ ತನ್ನ ಅವಧಿಯನ್ನೂ ಪಂಚಾಯಿತಿ ತಾಲ್ಲೂಕು ಬೋರ್ಡಿನ ಅವಧಿಯನ್ನೂ ಹೆಚ್ಚಿಸಿಕೊಂಡು ಅಧಿಕಾರಾರೂಢರಾಗಿ ಮೆರೆಯುವಕ್ಕ ಹವ್ಯಾಸಕ್ಕೆ ಕೈಹಾಕಿದ್ದಾರೆ. ಸರಕಾರ ಇಂತಹ ಅಕ್ಷಮ್ಯ ಕಾರ್ಯಕ್ಕೆ, ಒಂದು ವಿಪತ್ಕಾರಿ ಕೆಲಸಕ್ಕೆ ಏಕೆ ಕೈಹಾಕಿದರು ಎಂದು ಕೇಳುತ್ತೇನೆ. ಇಂದು ಸರ್ವಸಾಮಾನ್ಯವಾಗಿ ಎಲ್ಲ ಜನತೆಯ ಮನಸ್ಸೂ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳ ಆಡಳಿತ ವೈಖರಿ ಮತ್ತು ರೂಪರೇಖೆಯ ಬಗ್ಗೆ ಅಲ್ಲೋಲಕಲ್ಲೋಲವಾಗಿದೆ. ಇವುಗಳಿಗೆ ಚುನಾವಣೆ ತಕ್ಷಣ ನಡೆದು ವಾತಾವರಣ ಬದಲಾಯಿಸುವ ಸಂದರ್ಭ ಒದಗಿದ್ದರೆ ಕೊಂಚಮಟ್ಟಿಗಾದರೂ ಪರಿಸ್ಥಿತಿ ಸುಧಾರಿಸುತ್ತಿತ್ತು. ತನ್ಮೂಲಕ ಅಲ್ಲಿನ ಲೋಪದೋಷಗಳನ್ನು ಸರಿಪಡಿಸುವ ಅವಕಾಶ ದೊರಕುತ್ತಿತ್ತೆಂದು ಜನರ ಭಾವನೆ. ಹೀಗಿರುವಾಗ, ಇಂತಹ ಅಪವಿತ್ರವಾದ, ಹೇಯವಾದ ಈ ಒಂದು ಕಾರ್ಯವನ್ನು ಸರಕಾರ ಕೈಬಿಡಬೇಕು. ಈ ಸಭೆಯ ಈ ಅಧಿವೇಶನ ನಡೆಯುವಾಗಲೇ ಅಧ್ಯಕ್ಷರ ಅನುಮತಿ ಪಡೆದು ಇನ್ನು ನಾಲ್ಕು ದಿವಸ ಅಥವಾ ಎಂಟು ದಿವಸ, ಕೊಂಡಜ್ಜಿ ಬಸಪ್ಪ ಸಮಿತಿಯ ವರದಿ ಮತ್ತು ಹಾಯಿಂಡ್ ಸೆಲೆಕ್ಟ್ ಕಮಿಟಿಯ ವರದಿಯನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ, ಅಗತ್ಯವಿದ್ದ ಕಡೆ ಸ್ವಲ್ಪ ಮಾರ್ಪಾಡು ಮಾಡಿ ಆ ಮಸೂದೆಯನ್ನು ಜನತೆಯ ನೆಮ್ಮದಿಗಾಗಿ ಅಂಗೀಕಾರ ಮಾಡಬೇಕಾಗುತ್ತದೆ. ಸರಕಾರಕ್ಕೆ ಈಗಲೂ ಕಾಲ ಮಿಂಚಿಲ್ಲ, ಈ ತಿದ್ದುಪಡಿಯನ್ನು ಪಾಪಸು ಪಡೆದು ಆ ಮಸೂದೆಯನ್ನು ಸಭೆಯ ಮುಂದೆ ತರಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅದು

ಬಿಟ್ಟು ಈ ತಿದ್ದುಪಡಿ ಮಸೂದೆಯನ್ನು ತಮಗೆ ಸಂಖ್ಯಾಬಲವಿದೆ, ತಾವು ಪಾಸುಮಾಡಿಕೊಳ್ಳುತ್ತೇವೆ ಎಂಬ ಮನೋಭಾವದಿಂದ, ಅಂಗೀಕಾರ ಮಾಡಿಸಿಕೊಂಡರೆ, ಮೈಸೂರು ರಾಜ್ಯದಲ್ಲಿ ಪ್ರಜಾ ಪ್ರಭುತ್ವದ ಕಗ್ಗೊಲೆಯನ್ನು ಕಾಂಗ್ರೆಸ್ ಸರಕಾರ ನಡೆಸುತ್ತಿದೆ ಎಂದು ಒತ್ತಾಯಪೂರ್ವಕವಾಗಿ ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತಿದ್ದೇನೆ.

Mr. SPEAKER.—Now the House will rise and will meet tomorrow at 1 P.M.

The House adjourned at five minutes past Six of the Clock to meet again at One of the Clock on Tuesday the 2nd February 1965.

WD 1390—GPB—500—14-4-1965